# ಸೇವೆಯ ಕಡಲಿನಲ್ಲಿ ಮಾರ್ಮೊಳಗಿದ ಅಧ್ಯಾತ್ಮ ತರಂಗದ ದಿವ್ಯ ನಿರ್ಘೋಷ

ಡಾ. ಪ್ರಭುಶಂಕರ

ಜುಲೈ ೪, ೧೯೦೨. ಎಷ್ಟೋ ಶತಮಾನಗಳಿಗೊಮ್ಮೆ ಕಾಣಿಸಿಕೊಳ್ಳುವ ಯುಗಪುರುಷನೊಬ್ಬನ ಮಹಾಸಮಾಧಿಯ ದಿನ. ಜಗತ್ತು ಹಿಂದೆಂದೂ ಕಂಡರಿಯದಿದ್ದ ಸಕಲ ಸಾಕ್ಷಾತ್ಕಾರಗಳ ಸಂಗಮ ಸ್ಥಾನವೂ ಸರ್ವಧರ್ಮಗಳ ಸುಂದರ ಸಮನ್ವಯ ಮಂದಿರವೂ ಜೀವಾನುಕಂಪೆಯ ಸಾಕಾರಸ್ವರೂಪವೂ ಆಗಿದ್ದ ಶ್ರೀರಾಮಕೃಷ್ಣ ಪರಮಹಂಸರು ನೀಡಬಯಸಿದ ಸೇವಾಮಂತ್ರವನ್ನು ಸಮಗ್ರವಾಗಿ ಸ್ವೀಕರಿಸಲು ಅತ್ಯಂತ ಅರ್ಹನೂ ಭಾಗ್ಯಶಾಲಿಯೂ ಆಗಿದ್ದ ಸ್ವಾಮಿ ವಿವೇಕಾನಂದ ದೇವನು ತನ್ನ ಇಹ ಜೀವನದ ಲೀಲಾಕ್ಷೇತ್ರವಾಗಿದ್ದ ಪಾರ್ಥಿವ ಶರೀರವನ್ನು ತ್ಯಜಿಸುವ ಸಂಕಲ್ಪವನ್ನು ಕೈಗೊಂಡಿದ್ದ ದಿನ.

ಅಷ್ಟೊಂದು ದೀರ್ಘವಲ್ಲದ, ಕೇವಲ ಮೂವತ್ತೊಂಬತ್ತು ವರ್ಷಗಳ ಜೀವಿತಾವಧಿಯಲ್ಲಿ ಸ್ವಾಮಿ ವಿವೇಕಾನಂದರು ಸಾಧಿಸಿದ್ದೇನು? ಭರತಖಂಡದ ಉದ್ದಗಲಗಳಲ್ಲಿ ಸಂಚರಿಸಿ ಅತ್ಯಂತ ದೀನ ದರಿದ್ರರಿಂದ ಹಿಡಿದು ರಾಜಾಧಿರಾಜರುಗಳ ಮನೆ, ಮನಗಳನ್ನು ಒಳಹೊಕ್ಕು ಭಾರತದ ಲೌಕಿಕ, ಆಧ್ಯಾತ್ಮಿಕ ಮಿಡಿತಗಳ ಆತ್ಮೀಯ ಅರಿವನ್ನು ಪಡೆದದ್ದೆ? ಕಾಸಿಲ್ಲದೆ ಕಡಲನ್ನು ದಾಟಿ ಪರಿಚಯ ಪತ್ರವಿಲ್ಲದೆ ಷಿಕಾಗೋ ಧರ್ಮಸಮ್ಮೇಳನದ ವೇದಿಕೆಯನ್ನೇರಿ, ವೇದಾಂತದ ಅತ್ಯುನ್ನತ ತತ್ತ್ವಗಳನ್ನು ಘೋಷಿಸಿ, ಜಗತ್ತಿನ ಗಮನ ಗೌರವಗಳನ್ನು ಭಾರತದ ಅಂತರಂಗದ ಆಧ್ಯಾತ್ಮಿಕ ಸಂಪತ್ತಿನತ್ತ ಸೆಳೆದದ್ದೆ? ಪಶ್ಚಿಮದಿಂದ ಹಿಂದಿರುಗಿ ಭಾರತದಲ್ಲಿ ಸೇವಾಮುಖಿಯಾದ ಮಠವನ್ನು ತಮ್ಮ ಗುರುದೇವನ ಹೆಸರಿನಲ್ಲಿ ಸ್ಥಾಪಿಸಿದ್ದೆ? ಈ ಎಲ್ಲವೂ ಅವರ ಸಾಧನೆಗಳೇ ಹೌದಾದರೂ ಅವುಗಳ ಮೌಲ್ಯದಲ್ಲಿ ತಾರತಮ್ಯಗಳಿವೆ.

ಇವೆಲ್ಲಕ್ಕಿಂತಲೂ ಮಿಗಿಲಾದ ಸಾಧನೆಯೆಂದರೆ ಅವರು ಭಾರತದಲ್ಲಿ ನವಜಾಗೃತಿಯನ್ನು ಉಂಟುಮಾಡಿದುದು. ಭರತಖಂಡದಲ್ಲಿ ಇಂದು ಹತ್ತಾರು ಸಹಸ್ರ ಖಾಸಗೀ ಸಂಸ್ಥೆಗಳು ಜನರಿಗೆ ವಿದ್ಯೆ ನೀಡುವ, ಅನ್ನವಸತಿಗಳನ್ನು ಒದಗಿಸುವ, ರೋಗಿಗಳಿಗೆ ಶುಶ್ರೂಷೆ ನೀಡುವ ಕಾಯಕದಲ್ಲಿ ತೊಡಗಿವೆ. ಇದಕ್ಕೆಲ್ಲ ಮೂಲಸ್ಫೂರ್ತಿ ಸ್ವಾಮಿ ವಿವೇಕಾನಂದರಿಂದ ದೊರೆತದ್ದು ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಈ ಅರ್ಥದಲ್ಲಿ ರಾಷ್ಟ್ರೀಯ ಮಹಾಚೈತನ್ಯವನ್ನು ಜಾಗೃತಗೊಳಿಸಿ ಸೇವಾದೀಕ್ಷೆಯನ್ನು ನೀಡಿದ ಕೀರ್ತಿ ಸಲ್ಲಬೇಕಾದದ್ದು ಸ್ವಾಮಿ ವಿವೇಕಾನಂದರಿಗೆ.

ಅಂಥ ಸ್ವಾಮೀಜಿ ೧೯೦೨ರ ಜುಲೈ ೪ನೆಯ ತಾರೀಖು ದೇಹತ್ಯಾಗ ಮಾಡಲು ಸಂಕಲ್ಪ ಮಾಡಿದ್ದರು. ಶಿಷ್ಯರ ಜೊತೆಯಲ್ಲೇ ಬಹಳ ಕಾಲ ಇದ್ದರೆ ಅವರ ವ್ಯಕ್ತಿತ್ವ ಬೆಳೆಯಲು ಅವಕಾಶ ಇರುವುದಿಲ್ಲ ಎಂಬ ಅವರ ನಂಬಿಕೆ ಅವರ ಸಂಕಲ್ಪಕ್ಕೆ ಒಂದು ಕಾರಣ ಇರಬಹುದು. ಮತ್ತೊಂದು ಕಾರಣ ಅನಾರೋಗ್ಯದಿಂದ ಛಿದ್ರವಾಗಿದ್ದ ಅವರ ದೇಹ ತಮಗೆ ಭಾರವಾಗಿದೆ ಎಂದೂ ಅವರು ಭಾವಿಸಿರಬಹುದಾದದ್ದು. ಮೂರನೆಯದು ಮತ್ತು ಮುಖ್ಯವಾದದ್ದು ತಾನು ಯಾವ ಕಾರ್ಯಸಾಧನೆಗಾಗಿ ಜನ್ಮ ತಾಳಿದ್ದೆ ಎಂದು ಅವರು ತಿಳಿದಿದ್ದರೋ ಆ ಕಾರ್ಯ ಸಾಧಿತವಾಯಿತು ಎಂಬ ಅವರ ಭಾವನೆ.

ಜುಲೈ ೪, ೧೯೦೨ ಶುಕ್ರವಾರ. ಸ್ವಾಮೀಜಿ ಬಹಳ ಬೇಗ ಎದ್ದರು. ಒಬ್ಬರೇ ದೇವರ ಮನೆಗೆ ನಡೆದರು. ಕಿಟಕಿ ಬಾಗಿಲುಗಳನ್ನೆಲ್ಲ ಮುಚ್ಚಿ ಮೂರುಗಂಟೆಗಳ ಕಾಲ ದೀರ್ಘ ಧ್ಯಾನದಲ್ಲಿದ್ದರು. ಆಮೇಲೆ ಹೊರಗೆ ಬಂದು ಮೆಟ್ಟಿಲುಗಳನ್ನು ಇಳಿಯುತ್ತ "ದಿಟಕು ಕಪ್ಪಾಗಿಹಳೆ ನನ್ನ ತಾಯಿ ಕಾಳಿಯು" ಎಂಬ ಹಾಡನ್ನು ಹಾಡುತ್ತಾ ಬಂದರು. ಇದ್ದಕ್ಕಿದ್ದಂತೆ ನಿಂತು, "ಇನ್ನೊಬ್ಬ ವಿವೇಕಾನಂದ ಇದ್ದಿದ್ದರೆ ಈ ವಿವೇಕಾನಂದ ಏನು ಮಾಡಿದ್ದಾನೆ ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಿದ್ದ—ಆದರೂ ಕಾಲಕ್ರಮದಲ್ಲಿ, ಇನ್ನೂ ಎಷ್ಟೋ ಜನ ವಿವೇಕಾನಂದರು ಹುಟ್ಟುತ್ತಾರೆ" ಎಂದರು. ಪಕ್ಕದಲ್ಲಿದ್ದವರು ಆಶ್ಚರ್ಯಮೂಕರಾದರು. ಬಳಿಕ ತಮ್ಮ ಶಿಷ್ಯರಾದ ಶುದ್ಧಾನಂದರನ್ನು ಯಜುರ್ವೇದದಿಂದ ಯಾವುದೋ ಒಂದು ಋಕ್ಕನ್ನು ಭಾಷ್ಯಸಹಿತ ಓದುವಂತೆ ಹೇಳಿದರು. ಭಾಷ್ಯ ಅವರಿಗೆ ಒಪ್ಪಿಗೆಯಾಗಲಿಲ್ಲ. ಶಿಷ್ಯನಿಗೆ ಹೇಳಿದರು: "ವೇದಗಳಿಗೆ ನೀನೇ ಬೇರೆ ಭಾಷ್ಯ ಬರೆ."

ಸಾಮಾನ್ಯವಾಗಿ ಸ್ವಾಮೀಜಿ ಮಧ್ಯಾಹ್ನದ ಊಟವನ್ನು ತಮ್ಮ ಕೊಠಡಿಯಲ್ಲೇ ಮಾಡುತ್ತಿದ್ದರು. ಆದರೆ ಆ ದಿನ ಮಾತ್ರ ಎಲ್ಲರ ಜೊತೆ ಊಟದ ಮನೆಯಲ್ಲಿ ಸೇರಿ ಸಂತೋಷವಾಗಿ ಬಾಯಿ ಚಪ್ಪರಿಸಿ ಊಟ ಮಾಡಿದರು. ಊಟವಾದ ಮೇಲೆ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡರು. ಮಧ್ಯಾಹ್ನ ಎಂದಿನಂತೆ ಶಿಷ್ಯರಿಗೆ ಪಾಠ ಹೇಳಿದರು. ಮೂರುಗಂಟೆಗಳ ಕಾಲ ಸಂಸ್ಕೃತ ವ್ಯಾಕರಣವನ್ನು ಬೋಧಿಸಿದರು. ಮಧ್ಯೆಮಧ್ಯೆ ಎಲ್ಲರನ್ನೂ ನಕ್ಕುನಗಿಸಿ ನಲಿದಾಡಿದರು. ಸಂಜೆಯಾಯಿತು. ಸ್ವಾಮಿ ಪ್ರೇಮಾನಂದರ ಜೊತೆ ಎರಡು ಮೈಲಿ ವಾಯುಸಂಚಾರ ಮಾಡಿದರು. ತಮಗಿದ್ದ ಆಸೆ ವೇದದ ಕಾಲೇಜನ್ನು ಮಠದಲ್ಲೇ ಸ್ಥಾಪಿಸಬೇಕು ಎಂಬುದು ಎಂದು ಮತ್ತೊಮ್ಮೆ ಹೇಳಿದರು. ಪ್ರೇಮಾನಂದರು ಕೇಳಿದರು: "ಸ್ವಾಮೀಜಿ, ವೇದಗಳನ್ನು ಓದುವುದರಿಂದ ಏನು ಪ್ರಯೋಜನ?" ಸ್ವಾಮೀಜಿ ಹೇಳಿದರು: "ಮೌಢ್ಯವಾದರೂ ಪರಿಹಾರವಾಗುತ್ತದೆ."

ಸಂಚಾರದಿಂದ ಹಿಂದಿರುಗಿ ಸ್ವಾಮೀಜಿ ಮಠದಲ್ಲಿ ಪ್ರತಿಯೊಬ್ಬರ ಯೋಗಕ್ಷೇಮವನ್ನೂ ವಿಚಾರಿಸಿದರು. ಅನಂತರ ಬಹಳ ಹೊತ್ತಿನವರೆಗೆ ಜಗತ್ತಿನ, ರಾಷ್ಟ್ರಗಳ ಏಳು ಬೀಳುಗಳ ವಿಷಯ ಮಾತುಕತೆಯಾಡಿದರು. ಕೊನೆಯದಾಗಿ ಹೇಳಿದರು: "ಭಾರತ ಅಮರ, ಆಕೆ ತನ್ನ ದೇವರ ಹುಡುಕುವಿಕೆಯನ್ನು ಉಳಿಸಿಕೊಂಡರೆ ಮಾತ್ರ. ಆದರೆ ಆಕೆ ರಾಜಕೀಯಕ್ಕೂ ಸಾಮಾಜಿಕ ಹೊಡೆದಾಟಕ್ಕೂ ನಿಂತರೆ ಸತ್ತೇ ಸಾಯುತ್ತಾಳೆ."



ಬೇಲೂರು ಮಠದಲ್ಲಿರುವ ಸ್ವಾಮಿ ವಿವೇಕಾನಂದರ ಕೊಠಡಿ

ಸಂಜೆ ಏಳು ಗಂಟೆಗೆ ಮಠದಲ್ಲಿ ಆರತಿಯ ಘಂಟೆಯಾಯಿತು. ಸ್ವಾಮೀಜಿ ತಮ್ಮ ಕೊಠಡಿಯನ್ನು ಹೊಕ್ಕರು. ತಮ್ಮ ಜೊತೆ ಇದ್ದ ಸೇವಕನಿಗೆ ಸ್ವಾಮೀಜಿ ಹೇಳಿದರು, ತಾವು ಕರೆಯುವವರೆಗೂ ಯಾರೂ ಒಳಗೆ ಬರಕೂಡದು ಎಂದು. ಒಂದು ಗಂಟೆ ಕಾಲ ಜಪಮಾಲೆ ಹಿಡಿದು ಆಳ ಧ್ಯಾನದಲ್ಲಿ ಮುಳುಗಿದ್ದರು. ಆಮೇಲೆ ಸೇವಕನನ್ನು ಒಳಕ್ಕೆ ಕರೆದರು. ಎಲ್ಲ ಕಿಟಕಿಗಳನ್ನೂ ತೆರೆಯುವಂತೆ ಹೇಳಿದರು. ತಮ್ಮ ತಲೆಗೆ ಗಾಳಿ ಬೀಸುವಂತೆ ಹೇಳಿ ಹಾಸಿಗೆಯ ಮೇಲೆ ಶಾಂತವಾಗಿ ಮಲಗಿದರು. ಒಂದು ಗಂಟೆ ಕಾಲ ಅದೇ ಸ್ಥಿತಿಯಲ್ಲಿದ್ದರು. ಮಲಗಿರಬಹುದು, ಇಲ್ಲ ಧ್ಯಾನ ಮಾಡುತ್ತಿರಬಹುದು ಎಂದು ಸೇವಕ ಭಾವಿಸಿದ. ಒಂದು ಗಂಟೆಯ ಬಳಿಕ ಇದ್ದಕ್ಕಿದ್ದಂತೆ ಸ್ವಾಮೀಜಿಯ ಕೈ ಅದುರಿತು. ಸ್ವಾಮೀಜಿ ದೀರ್ಘವಾಗಿ ಉಸಿರೆಳೆದುಕೊಂಡರು. ಅನಂತರ ಒಂದೆರಡು ನಿಮಿಷಗಳ ಮೌನ. ಮತ್ತೆ ಸ್ವಾಮೀಜಿ ಅದೇ ರೀತಿ ಒಂದು ಸಲ ಉಸಿರೆಳೆದುಕೊಂಡರು. ಅವರ ಕಣ್ಣುಗಳ ಹುಬ್ಬಿನ ಮಧ್ಯೆ ದೃಷ್ಟಿ ನೆಟ್ಟುವು. ಅವರ ಮುಖ ಅಪೂರ್ವವಾದ ಕಾಂತಿಯನ್ನು ತಳೆಯಿತು. ಅನಂತರ ಶಾಂತಿ ಅಲ್ಲಿ ನೆಲೆಸಿತು.

ಸೋದರರು ಭಾವಿಸಿದರು, ಸ್ವಾಮೀಜಿ ದೀರ್ಘವಾದ ಧ್ಯಾನದಲ್ಲಿದ್ದಾರೆ ಎಂದು. ಆಗ ಒಂಬತ್ತು ಗಂಟೆ ಹತ್ತು ನಿಮಿಷ. ಅವರಿಗೆ ಗೊತ್ತಾಗಲಿಲ್ಲ, ಸ್ವಾಮೀಜಿ ಇದ್ದದ್ದು ಮಹಾಸಮಾಧಿಯಲ್ಲಿ ಎಂದು! ವೈದ್ಯರು ಬಂದರು. ದೇಹವನ್ನು ಪರೀಕ್ಷಿಸಿದರು. ಸಾವು ಅವರಿಗೂ ತನ್ನ ಸುಳಿವು ಬಿಡಲಿಲ್ಲ. ಕೃತಕ ಉಸಿರಾಟ ಪ್ರಯತ್ನಿಸಿದರು. ಕೊನೆಗೆ ಹೃದಯ ಸ್ತಂಭನ ಎಂದು ತೀರ್ಮಾನಿಸಿದರು. ಸುದ್ದಿ ರಹಡಿ ಕಲ್ಕತ್ತ ಶೋಕಮೂರ್ಛಿತವಾಯಿತು. ಪೂರ್ವ-ಪಶ್ಚಿಮ ಗೋಳಗಳೆರಡೂ ದುಃಖವನ್ನು ಹಂಚಿಕೊಂಡುವು.

ಮರುದಿನ ಮಧ್ಯಾಹ್ನ ಎರಡು ಗಂಟೆಯವರೆಗೂ ದೇಹ ಅವರ ಕೊಠಡಿಯಲ್ಲೇ ಇತ್ತು. ಅವರ ಪ್ರಿಯಶಿಷ್ಯೆ ನಿವೇದಿತಾ ಅಷ್ಟು ಹೊತ್ತೂ ಕುಳಿತು ಗಾಳಿ ಬೀಸುತ್ತಿದ್ದಳು. ದೇಹವನ್ನು ಹೊರಕ್ಕೆ ತಂದು ಕಾವಿಯ ಬಟ್ಟೆಯಿಂದ ಮುಚ್ಚಿದರು. ಹೂವುಗಳನ್ನು ಸುರಿದರು. ಸಹಸ್ರ ಸಹಸ್ರ ಜನ ನೆರೆದು ತಮ್ಮ ನಾಡಿನ ಹೆಮ್ಮೆಯನ್ನು ನೀರು ತುಂಬಿದ ಕಣ್ಣಿನಿಂದ ನೋಡುತ್ತ ನಿಂತಿದ್ದರು. ಆರತಿ ನಡೆಯಿತು. ಶಂಖ ಜಾಗಟೆಗಳು ಮೊಳಗಿದುವು. ಮಹಾಯಾತ್ರೆ ನಡೆದು, ಗಂಗಾತೀರದಲ್ಲಿ ಸ್ವಾಮಿಗಳೇ ತೋರಿಸಿದ್ದ ಜಾಗದಲ್ಲಿ ಚಿತೆಯ ಮೇಲೆ ಮಲಗಿಸಿ ಅಗ್ನಿಸ್ಪರ್ಶ ಮಾಡಿದರು.

ದೂರದಲ್ಲಿ ಸೋದರಿ ನಿವೇದಿತಾ ಕುಳಿತು ಅಳುತ್ತಿದ್ದಳು. ಆಗಾಗ ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದಳು. ಅವಳಿಗೆ ಒಂದು ಆಸೆಯಿತ್ತು, ಸ್ವಾಮೀಜಿ ಕೊನೆಯಬಾರಿ ಧರಿಸಿದ್ದ ಬಟ್ಟೆಯ ಒಂದು ಚೂರನ್ನು ತೆಗೆದುಕೊಳ್ಳಬೇಕು ಎಂದು. ಅದು ತನಗಾಗಿ ಅಲ್ಲ, ಅಮೆರಿದಲ್ಲಿದ್ದ ತನ್ನ ಗೆಳತಿಗಾಗಿ. ಆದರೆ ಆಕೆಗೆ ಮಾತು ಕೊಟ್ಟಿರಲಿಲ್ಲ. ಇದ್ದಕ್ಕಿದ್ದಂತೆ ತೊಡೆಯಮೇಲೆ ಏನೋ ಒಂದು ಬಿದ್ದಂತಾಯಿತು. ನೋಡುತ್ತಾಳೆ! ಚಿತೆಯಿಂದ ಸ್ವಾಮೀಜಿಯ ಬಟ್ಟೆಯ ಒಂದು ತುಣುಕು ಹಾರಿಬಂದು ತನ್ನ ತೊಡೆಯ ಮೇಲೆ ಬಿದ್ದಿದೆ! ಆಶ್ಚರ್ಯಚಕಿತಳಾಗಿ ನಿವೇದಿತಾ ಬಟ್ಟೆಯನ್ನು ಕಣ್ಣಿಗೊತ್ತಿಕೊಂಡಳು.

ತಮ್ಮ ನೆಚ್ಚಿನ ಸ್ವಾಮೀಜಿ, ಭಾರತದ ವೇದಾಂತವೀರ ಇನ್ನಿಲ್ಲ. ಕಲ್ಕತ್ತೆ, ಅದರಲ್ಲೂ ಬೇಲೂರು ಮಠ ಕಣ್ಣೀರಿನ ಕಡಲಾಗಿತ್ತು. ಅವರಿಗೆ ಮೂವತ್ತೊಂಬತ್ತು ವರ್ಷಗಳಾಗಿ ಐದು ತಿಂಗಳು ಮಾತ್ರ ಕಳೆದಿತ್ತು. ಅವರೇ ಹೇಳಿದ್ದರು: "ನನ್ನ ನಲವತ್ತನೆಯ ವರ್ಷವನ್ನು ನೋಡುವುದಕ್ಕೆ ನಾನು ಇರುವುದಿಲ್ಲ." ಅವರ ಮಾತನ್ನೇನೊ ಅವರು ನಿಜ ಮಾಡಿ ಹೋದರು. ಆದರೆ ಉಳಿದವರ ಸ್ಥಿತಿಯೋ? ಅವರ ಒಂದು ವಾಣಿ ಮಾತ್ರ ಗಾಳಿಯಲ್ಲಿ ಮೊರೆಯುತ್ತಿತ್ತು: "ಈ ದೇಹವನ್ನು ಬಿಸಾಡುವುದು ನನಗೇನೋ ಒಳ್ಳೆಯದೇ. ಅದು ಹರಿದ ಬಟ್ಟೆಯ ಹಾಗೆ. ಆದರೆ ನಾನು ಕೆಲಸ ಮಾಡುವುದನ್ನು ಮಾತ್ರ ನಿಲ್ಲಿಸುವುದಿಲ್ಲ. ಜಗತ್ತು ತಾನೂ ಭಗವಂತನೂ ಒಂದೇ ಎಂದು ತಿಳಿಯುವವರೆಗೂ ಎಲ್ಲೆಲ್ಲಿಯೂ ಜನರಿಗೆ ಸ್ಫೂರ್ತಿಯನ್ನು ಕೊಡುತ್ತಲೇ ಇರುತ್ತೇನೆ."

ಒಂದು ದೊಡ್ಡ ಶಕ್ತಿ ದೂರದಿಂದ ಇಲ್ಲಿಗೆ ಬಂತು, ಮಿಂಚಿತು, ಗುಡುಗಿತು, ಸಿಡಿಲು ಸೂಸಿತು, ಶಕ್ತಿಯ ಜಲಪಾತವಾಗಿ ಭೋರ್ಗರೆಯಿತು. ಆ ಶಕ್ತಿಯ ಮೂರ್ತಿ ಮತ್ತೆ ಬಂದಲ್ಲಿಗೇ ಹಿಂದಿರುಗಿದಂತೆ ತೋರಿದರೂ ಹಾಗಾಗಲಿಲ್ಲ. ಶಕ್ತಿಪಾತ ಸಂತತವಾಗಿ ನಡೆಯುತ್ತಲೇ ಹೋಯಿತು. ಜಗತ್ತು ಅದರಲ್ಲೂ ಭಾರತ ಆ ಶಕ್ತಿಯನ್ನು ಅನುಭವಿಸುವುದನ್ನು ಒಂದು ಕ್ಷಣವೂ ಬಿಡುವಂತಿಲ್ಲ. ★

ಸ್ಥಳದಾನ : ಶ್ರೀ ದುರ್ಗಾ ಸ್ಟೀಲ್ಸ್, ಬೆಂಗಳೂರು